# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

**ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070**

## ವಾರ್ಷಿಕ ವರದಿ 2015–16

### 1. ರಾಜ್ಯಮಟ್ಟದ ಮಹಿಳಾ ವಿಜ್ಞಾನ ಸಮಾವೇಶ

2014–15ನೇ ಸಾಲಿನ ರಾಜ್ಯಮಟ್ಟದ ಮಹಿಳಾ ವಿಜ್ಞಾನ ಸಮಾವೇಶವನ್ನು 8–9, ಏಪ್ರಿಲ್ 2015ರಂದು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿರುವ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ರಾಜ್ಯದಾದ್ಯಂತ ವಿವಿಧ ಜಿಲ್ಲೆಗಳಿಂದ ಆಗಮಿಸಿದ 98 ಮಹಿಳಾ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ದಿನಾಂಕ 8 ಏಪ್ರಿಲ್ 2015ರಂದು ಬೆಳಿಗ್ಗೆ 10.30ಗಂಟೆಗೆ ಜರುಗಿದ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯ ಮಹಿಳಾ ಆಯೋಗದ ಮುಖ್ಯಸ್ಥರಾದ ಶ್ರೀಮತಿ ಮಂಜುಳಾ ಮಾನಸ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕರಾದ ಡಾ. ಉದಯರಾಯ್ಕರ್, ಧಾರವಾಡ ಜಿಲ್ಲಾ ವಿಜ್ಞಾನ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಸಂಜೀವ್ ಕುಮಾರ್ ಭೂಶೆಟ್ಟಿ ಹಾಗೂ ಕರ್ನಾಟಕ ವಿಜ್ಞಾನ ಪರಿಷತ್ತಿನ ಗೌರವ ಕಾರ್ಯದರ್ಶಿ ಹಾಗೂ ಮಹಿಳೆ ಮತ್ತು ವಿಜ್ಞಾನ ಯೋಜನೆಯ ಸಂಚಾಲಕರಾದ ಡಾ. ವಸುಂಧರಾ ಭೂಪತಿ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಜ್ಞಾನ ಪರಿಷತ್ತಿನ ಹಾಲಿ ಅಧ್ಯಕ್ಷರೂ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ. ಸಂಕನೂರ ವಹಿಸಿದ್ದರು. ಸಮಾವೇಶದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ವೈ.ಸಿ. ಕಮಲ, ಶ್ರೀಮತಿ ಸುಮಂಗಲಾ ಮುಮ್ಮಿಗಟ್ಟಿ, ಡಾ. ಸುಮಾಹಸಲ್ಕರ್, ಶ್ರೀಮತಿ ಜಿ.ವಿ. ನಿರ್ಮಲ, ಡಾ. ವಿಜಯಲಕ್ಷ್ಮಿ ಅಮ್ಮಿನಬಾವಿ, ಡಾ. ವಿನಯಾ ವಕ್ಕುಂದ, ಶ್ರೀಮತಿ ಕೆ.ಎಸ್. ವಿಮಲ ಇವರುಗಳು ಭಾಗವಹಿಸಿ ಮಹಿಳಾ ಪ್ರತಿನಿಧಿಗಳಿಗೆ ವಿವಿಧ ವಿಷಯಗಳ ಕುರಿತು ಮಾರ್ಗದರ್ಶನ ನೀಡಿದರು.

### 2. 15ನೇ ಅಖಿಲ ಭಾರತ ಜನವಿಜ್ಞಾನ ಸಮಾವೇಶ.

2015ನೇ ಸಾಲಿನ ಅಖಿಲ ಭಾರತ ಮಟ್ಟದ ಜನವಿಜ್ಞಾನ ಸಮಾವೇಶವನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹಾಗೂ ಭಾರತ ಜ್ಞಾನ–ವಿಜ್ಞಾನ ಸಮಿತಿ ಇವುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 22–25, ಮೇ 2015 ಅವಧಿಯಲ್ಲಿ ಬೆಂಗಳೂರಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಮಾವೇಶದ ಪೂರ್ವದಲ್ಲಿ ಹಲವಾರು ವೈಜ್ಞಾನಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಜರುಗಿಸಲಾಯಿತು. ದಿನಾಂಕ 5–6, ಮೇ 2015ರಂದು ಕರಾವಿಪದ ಪ್ರೊ|| ಎಂ.ಎ. ಸೇತುರಾವ್ ಸಭಾಂಗಣದಲ್ಲಿ "ಪಶ್ಚಿಮ ಘಟ್ಟಗಳ ಸಂರಕ್ಷಣೆ" ವಿಷಯ ಕುರಿತಂತೆ ಕಾರ್ಯಾಗಾರವೊಂದನ್ನು ಆಯೋಜಿಸಲಾಗಿತ್ತು. ಅದರಂತೆ ದಿನಾಂಕ 14–15, ಮೇ 2015ರಂದು ಕರಾವಿಪ ಪ್ರೊ|| ಎಂ.ಎ. ಸೇತುರಾವ್ ಸಭಾಂಗಣದಲ್ಲಿ "ವೈಜ್ಞಾನಿಕ ಮನೋಭಾವನೆ" ಕುರಿತಂತೆ ಕಾರ್ಯಾಗಾರ ಏರ್ಪಡಿಸಲಾಗಿತ್ತು. ಇದೇ ರೀತಿಯಾಗಿ ದಿನಾಂಕ 15, 16, 17 ಮೇ 2015 ಗಳಂದು ಬೀದರ ಜಿಲ್ಲೆಯ ಔರಾದ್, ಹುಮನಾಬಾದ್, ಬೀದರ, ಭಾಲ್ಕಿ ಹಾಗೂ ಬಸವಕಲ್ಯಾಣ ನಗರಗಳಲ್ಲಿ "ವೈಜ್ಞಾನಿಕ ಮನೋಭಾವನೆ" ಹಾಗೂ "ವಿಜ್ಞಾನ ತಂತ್ರಜ್ಞಾನ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳು" ಕುರಿತಂತೆ ಭಿತ್ತಿ ಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ದಿನಾಂಕ 17–18, ಮೇ 2015ಗಳಂದು ಗದಗ ಜಿಲ್ಲೆಯ ಹುಲಕೋಟಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರ ಆವರಣದಲ್ಲಿ ದಿನಾಂಕ 17ರಂದು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ, ದಿನಾಂಕ 18ರಂದು ರಾಯಚೂರಿನ ಮುಖ್ಯ ಬೀದಿಗಳಲ್ಲಿ ಹಾಗೂ ದಿನಾಂಕ 19ರಂದು ಹಾವೇರಿ ನಗರದ ಮುಖ್ಯ ಬೀದಿಗಳಲ್ಲಿ ಭಿತ್ತಿ ಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ದಿನಾಂಕ 22–25, ಮೇ 2015 ಗಳಂದು ನಡೆದ ಸಮಾವೇಶದ ಉದ್ಘಾಟನೆಯನ್ನು ದೇಶದ ಮಾನ್ಯ ಉಪರಾಷ್ಟ್ರಪತಿಗಳಾದ ಶ್ರೀ ಹಮೀದ್ ಅನ್ಸಾರಿ ಇವರು ಕರ್ನಾಟಕ ರಾಜ್ಯಪಾಲರಾದ ಶ್ರೀ ವಾಜುಭಾಯಿ ವಾಲ, ದೇಶದ ಶ್ರೇಷ್ಠ ವಿಜ್ಞಾನಿಗಳಾದ ಪ್ರೊ|| ಸಿ.ಎನ್.ಆರ್. ರಾವ್ ಹಾಗೂ ಪ್ರೊ|| ಯು.ಆರ್. ರಾವ್ ಇವರುಗಳ ಉಪಸ್ಥಿತಿಯಲ್ಲಿ ನೆರವೇರಿಸಿದರು. ನಾಲ್ಕು ದಿನಗಳ ಕಾಲ ನಡೆದ ಸಮಾವೇಶದ ಅಂಗವಾಗಿ ವಿವಿಧ ಗೋಷ್ಠಿಗಳು ಹಾಗೂ ಕಾರ್ಯಾಗಾರಗಳು ಆಯೋಜನೆಗೊಂಡಿದ್ದವು. ದೇಶದ ವಿವಿಧ ಮೂಲಗಳಿಂದ ಆಗಮಿಸಿದ 500ಕ್ಕೂ ಹೆಚ್ಚು ಪ್ರತಿನಿಧಿಗಳು, ವಿಜ್ಞಾನಿಗಳು, ಸಾಮಾಜಿಕ ಕಾರ್ಯಕರ್ತರು, ಶಿಕ್ಷಣ ತಜ್ಞರು ಹಾಗೂ ವಿಜ್ಞಾನಾಸಕ್ತರು ಭಾಗವಹಿಸಿದ್ದರು.

### 3. ಉದಯೋನ್ಮುಖ ವಿಜ್ಞಾನ ಲೇಖಕರ ಕಾರ್ಯಾಗಾರ

ಉದಯೋನ್ಮುಖ ವಿಜ್ಞಾನ ಲೇಖಕರ ಕಾರ್ಯಾಗಾರವನ್ನು ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ ಇಲ್ಲಿ ದಿನಾಂಕ 22 ರಿಂದ 26, ಜುಲೈ 2015 ರವರೆಗೆ ಆಯೋಜಿಸಲಾಗಿತ್ತು. 40 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಪ್ರೊ|| ಹಿ.ಚಿ. ಬೋರಲಿಂಗಯ್ಯ ಉಪಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಇವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಶಿಬಿರಾರ್ಥಿಗಳನ್ನು ಕರಡಿ ಧಾಮ ದರೋಜಿ, ಹೊಸಪೇಟೆ ತಾ. ಬಳ್ಳಾರಿ ಇಲ್ಲಿಗೆ ಭೇಟಿ ಮಾಡಿಸಲಾಗಿತ್ತು. ಶ್ರೀಮತಿ ಶ್ರೀಮತಿ ಹರಿಪ್ರಸಾದ್, ಶಿಬಿರದ ನಿರ್ದೇಶಕರಾಗಿ ಮತ್ತು ಡಾ|| ಶೇಖರ್ ಗೌಳೇರ್, ಶಿಬಿರದ ಸಹ ನಿರ್ದೇಶಕರಾಗಿ ಭಾಗವಹಿಸಿದ್ದರು. ಶ್ರೀ ಹಾಲ್ದೊಡ್ಡೇರಿ ಸುಧೀಂದ್ರ , ವಿಜ್ಞಾನ ಸಂವಹನಕಾರರು, ವಿಜ್ಞಾನಿ ಪ್ರೊ. ಎಂ.ಆರ್.

ನಾಗರಾಜು, ಶ್ರೀ ಹಾಲ್ದೊಡ್ಡೇರಿ ಸುಧೀಂದ್ರ, ಡಾ॥ ವಿ.ಎನ್. ನಾಯಕ್, ಡಾ॥ ಎಚ್.ಆರ್. ಸ್ವಾಮಿ, ಶ್ರೀಮತಿ ಸುಮಂಗಲ ಎಸ್. ಮುಮ್ಮಿಗಟ್ಟಿ, ಶ್ರೀ ಪೂರ್ಣಪ್ರಜ್ಞ ಬೇಳೂರು, ಶ್ರೀ ನಾರಾಯಣ ಬಾಬಾನಗರ, ಶ್ರೀ ಸಮದ್ ಕೊಟ್ಟೂರು ಮತ್ತು ಶ್ರೀ ಎಸ್. ಮಂಜುನಾಥ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

**4. ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ: 2014-15**

ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ: 2014-15 ನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಇವರ ನೆರವಿನಲ್ಲಿ ಕಾಲೇಜು ಶಿಕ್ಷಣ ಇಲಾಖೆ, ರಾಯಚೂರು ಕರಾವಿಪ ಜಿಲ್ಲಾ ಸಮಿತಿ ಮತ್ತು ಎಲ್.ವಿ.ಡಿ. ಕಾಲೇಜು, ರಾಯಚೂರು ಇವುಗಳ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು 8 ಮತ್ತು 9 ಆಗಸ್ಟ್ 2015 ರಂದು ಎಲ್.ವಿ.ಡಿ. ಕಾಲೇಜು, ರಾಯಚೂರು ಇಲ್ಲಿ ಸಂಘಟಿಸಿತ್ತು.
26 ಮಾದರಿ ಗಳು ಪ್ರದರ್ಶನಗೊಂಡಿದ್ದವು.

**5. "ಕರ್ನಾಟಕ ವಿಜ್ಞಾನ ವಿದ್ಯಾ ಜಾಗೃತಿ ವಿದ್ಯಾರ್ಥಿ- ವಿಜ್ಞಾನಿ ನೇರ ಸಂವಾದ" ಕಾರ್ಯಕ್ರಮ 2015-16**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ನೆರವಿನೊಂದಿಗೆ ಕರ್ನಾಟಕದ 10 ಕ್ಲಸ್ಟರ್‌ಗಳಲ್ಲಿ ಪ್ರೌಢ ಮತ್ತು ಪದವಿಪೂರ್ವ ಆಯ್ದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ – ವಿಜ್ಞಾನಿ ನೇರ ಸಂವಾದ ಕಾರ್ಯಕ್ರಮವನ್ನು ಕರಾವಿಪ ಕಾರ್ಯಕಾರಿ ಸಮಿತಿಯ ನೇತೃತ್ವದಲ್ಲಿ ಸಂಘಟಿಸಿತ್ತು. ಪ್ರತಿ ಕ್ಲಸ್ಟರ್‌ನಲ್ಲಿ 3 ಜಿಲ್ಲೆಗಳ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಪ್ರತಿ ಕ್ಲಸ್ಟರ್‌ನಲ್ಲಿ ಮೂರು ಜಿಲ್ಲೆಗಳಿಂದ ಒಟ್ಟು 195 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಒಟ್ಟು 2000 ಶಿಬಿರಾರ್ಥಿಗಳು ಮತ್ತು ವಿವಿಧ ಸಂಸ್ಥೆಗಳಿಂದ 36 ವಿಜ್ಞಾನಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಚಾಮರಾಜನಗರ ಕ್ಲಸ್ಟರ್** ಕಾರ್ಯಕ್ರಮವನ್ನು 11.08.2015 ಮತ್ತು 12.08.2015 ರಂದು ಕೊಳ್ಳೇಗಾಲದ ಶ್ರೀ ಭ್ರಮರಾಂಭ ಕಲ್ಯಾಣ ಮಂಟಪ, ಬಾಪು ನಗರ, ಮೈಸೂರು ರಸ್ತೆ, ಚಾಮರಾಜನಗರ ಜಿಲ್ಲೆ ಇಲ್ಲಿ(ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳು ಸೇರಿದಂತೆ) ಆಯೋಜಿಸಲಾಗಿತ್ತು. ಶ್ರೀ ಶಿವಶಂಕರ್ ಸಂಯೋಜಕರಾಗಿ ಕಾರ್ಯ ನಿರ್ವಹಿಸಿದ್ದರು. ಡಾ॥ ವಿನೋದ್ ಲಕ್ಕಪ್ಪನ್, ಸೈಂಟಿಸ್ಟ್, ಡಿ.ಎನ್.ಎ. ಸೆಂಟರ್, ಮಡಿವಾಳ, ಬೆಂಗಳೂರು, ಡಾ॥ ಹರೀಶ್‌ಭಟ್ ಸಿ.ಇ.ಎಸ್, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು, ಪ್ರೊ॥ ಕೆ.ಎಸ್. ಮಲ್ಲೇಶ್ ಮುಖ್ಯಸ್ಥರು, ಭೌತಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ಶ್ರೀ ಕೊಳ್ಳೇಗಾಲ ಶರ್ಮ ಮುಖ್ಯಸ್ಥರು, ಮಾಹಿತಿ ಮತ್ತು ಪ್ರಚಾರ ಸಿ.ಎಫ್.ಟಿ.ಆರ್.ಐ., ಮೈಸೂರು ವಿಷಯ : ನಾಲ್ಕು ತಂತಿ ಡಾ॥ ಸಿ.ಎಸ್. ಯೋಗಾನಂದ್, ಪ್ರೊಫೆಸರ್ ಆಫ್ ಮ್ಯಾಥಮ್ಯಾಟಿಕ್ಸ್ ಜೆ.ಎಸ್.ಎಸ್. ಕಾಲೇಜು, ಮೈಸೂರು ಇವರುಗಳು ವಿಜ್ಞಾನಿಗಳಾಗಿ ಭಾಗವಹಿಸಿದ್ದರು.

**ಚಿಕ್ಕಬಳ್ಳಾಪುರ ಕ್ಲಸ್ಟರ್** ಕಾರ್ಯಕ್ರಮವನ್ನು ದಿನಾಂಕ 10 ಮತ್ತು 11 ಆಗಸ್ಟ್ 2015 ರಂದು ವೀರಸೌಧ ಸಭಾಂಗಣ, ವಿದುರಾಶ್ವತ್ಥ, ಗೌರಿಬಿದನೂರು ತಾ. ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. (ಚಿಕ್ಕಬಳ್ಳಾಪುರ ಕ್ಲಸ್ಟರ್ ಕೋಲಾರ, ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳು ಒಳಗೊಂಡಿರುತ್ತದೆ). ಡಾ॥ ಎಸ್. ಚಟರ್ಜಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಬೆಂಗಳೂರು ಡಾ॥ ಎಸ್. ಕೃಷ್ಣಪ್ರಸಾದ್ ಸೈಂಟಿಸ್ಟ್, ಸೆಂಟರ್ ಫಾರ್ ಸಾಫ್ಟ್ ಮ್ಯಾಟರ್ ರೀಸರ್ಚ್, ಪ್ರೊ॥ ಕೆ.ಜೆ.ರಾವ್, ನಿವೃತ್ತ ಪ್ರೊಫೆಸರ್ ಸಾಲಿಡ್ ಸ್ಟೇಟ್ ಅಂಡ್ ಸ್ಟ್ರಕ್ಚರಲ್ ಕೆಮಿಸ್ಟ್ರಿ ಯೂನಿಟ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು ಶ್ರೀ ಎಸ್. ಹಿರಿಯಣ್ಣ ಡೆಪ್ಯುಟಿ ಪ್ರಾಜೆಕ್ಟ್ ಡೈರೆಕ್ಟರ್, ಸ್ಪೇಸ್ ಕ್ರಾಫ್ಟ್ ಸಿಸ್ಟಮ್, ಜಿಸ್ಯಾಟ್ – 6 ಪ್ರಾಜೆಕ್ಟ್, ಇಸ್ರೋ ಸ್ಯಾಟಲೈಟ್ ಸೆಂಟರ್, ಬೆಂಗಳೂರು ಇವರುಗಳು ವಿಜ್ಞಾನಿಗಳಾಗಿ ಭಾಗವಹಿಸಿದ್ದರು.

**ಕಲ್ಬುರ್ಗಿ** ಕ್ಲಸ್ಟರ್ ಮಟ್ಟದ ಕಾರ್ಯಕ್ರಮವನ್ನು **ದಿನಾಂಕ 21 ಮತ್ತು 22ನೇ ಸೆಪ್ಟೆಂಬರ್ 2015 ರಂದು ಸಂತ ಜೇವಿಯರ್ ಪದವಿಪೂರ್ವ ಕಾಲೇಜು, ಭಾರತೀಯ ವಿದ್ಯಾ ಕೇಂದ್ರ ಹತ್ತಿರ, ಜೇವರ್ಗಿ ರಸ್ತೆ, ಸಿರನೂರು, ಕಲ್ಬುರ್ಗಿ** ಇಲ್ಲಿ ಆಯೋಜಿಸಲಾಗಿತ್ತು. ಕಲ್ಬುರ್ಗಿ ಕ್ಲಸ್ಟರ್‌ನಲ್ಲಿ, ಕಲ್ಬುರ್ಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳು ಸೇರಿಕೊಳ್ಳುತ್ತವೆ. ಡಾ॥ ಪ್ರಜ್ವಲ ಶಾಸ್ತ್ರಿ, ವಿಜ್ಞಾನಿ, ಭಾರತೀಯ ಖಭೌತ ವಿಜ್ಞಾನ ಸಂಸ್ಥೆ, ಕೋರಮಂಗಲ ಬೆಂಗಳೂರು, ಡಾ॥ ಇಂದ್ರಾಣಿ ಪರಿಸರ ತಜ್ಞರು, ಡಾ॥ ಎಸ್. ಕೃಷ್ಣಪ್ರಸಾದ್ ಸೈಂಟಿಸ್ಟ್, ಸೆಂಟರ್ ಫಾರ್ ಸಾಫ್ಟ್ ಮ್ಯಾಟರ್ ರೀಸರ್ಚ್, ಶ್ರೀ ಕೊಳ್ಳೇಗಾಲ ಶರ್ಮ, ಮುಖ್ಯಸ್ಥರು, ಮಾಹಿತಿ ಮತ್ತು ಪ್ರಚಾರ ವಿಭಾಗ, ಸಿ.ಎಫ್.ಟಿ.ಆರ್.ಐ. ಬೆಂಗಳೂರು ಇವರುಗಳು ವಿಜ್ಞಾನಿಗಳಾಗಿ ಭಾಗವಹಿಸಿದ್ದರು. ಶ್ರೀ ಗಿರೀಶ್ ಬಿ. ಕಡ್ಲೇವಾಡ ಅವರು ಸಂಯೋಜಕರಾಗಿ ಭಾಗವಹಿಸಿದ್ದರು.

**ಶಿವಮೊಗ್ಗ ಕ್ಲಸ್ಟರ್ ಮಟ್ಟದಲ್ಲಿ** (ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳು ಸೇರಿದಂತೆ) ಆಯ್ದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ – ವಿಜ್ಞಾನಿ ನೇರ ಸಂವಾದ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು. ಶಿವಮೊಗ್ಗ ಕ್ಲಸ್ಟರ್ ಮಟ್ಟದ ಕಾರ್ಯಕ್ರಮವನ್ನು ದಿನಾಂಕ 21 ಮತ್ತು 22ನೇ ಸೆಪ್ಟೆಂಬರ್ 2015 ರಂದು ಅಂಬೇಡ್ಕರ್ ಭವನ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಡಾ॥ ವಿನೋದ್ ಲಕ್ಕಪ್ಪನ್, ವಿಜಾನಿ ಹಾಗೂ ಸಹಾಯಕ ನಿರ್ದೇಶಕರು, ವಿಷವಿಜ್ಞಾನ ವಿಭಾಗ ನ್ಯಾಯ ವಿಜ್ಞಾನ ಪ್ರಯೋಗಾಲಯ, ಮಡಿವಾಳ, ಬೆಂಗಳೂರು ಡಾ॥ ಶ್ರೀಕಾಂತ ಶಾಸ್ತ್ರಿ, ವಿಜ್ಞಾನಿ, ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಅಧ್ಯಯನ ಕೇಂದ್ರ, ಬೆಂಗಳೂರು, ಡಾ॥ ಹರೀಶ್ ಭಟ್, ಪರಿಸರ ವಿಜ್ಞಾನಿ, ಭಾರತೀಯ ವಿಜ್ಞಾನ

ಮಂದಿರ, ಬೆಂಗಳೂರು ಇವರುಗಳು ವಿಜ್ಞಾನಿಗಳಾಗಿ ಭಾಗವಹಿಸಿದ್ದರು. ಡಾ॥ ಶೇಖರ್ ಗೌಳೇರ್ ಅವರು ಸಂಯೋಜಕರಾಗಿ ಭಾಗವಹಿಸಿದ್ದರು.

**ಬೆಳಗಾವಿ ಕ್ಲಸ್ಟರ್** ಮಟ್ಟದ ಕಾರ್ಯಕ್ರಮವನ್ನು **ದಿನಾಂಕ 11 ಮತ್ತು 12ನೇ ಸೆಪ್ಟೆಂಬರ್ 2015 ರಂದು ನಿತ್ಯ ಮಂಗಲ ಸಭಾಭವನ, ಪಂತ ಬಾಳೇಕುಂದ್ರಿ, ತಾ ಮತ್ತು ಜಿಲ್ಲೆ ಬೆಳಗಾವಿ** ಮತ್ತು ಧಾರವಾಡ **ಕ್ಲಸ್ಟರ್** ಮಟ್ಟದ ಕಾರ್ಯಕ್ರಮವನ್ನು **ದಿನಾಂಕ 11 ಮತ್ತು 12ನೇ ಸೆಪ್ಟೆಂಬರ್ 2015 ರಂದು ಈಶ್ವರೀಯ ವಿಶ್ವವಿದ್ಯಾಲಯ, ತಪೋವನ**, ಯಲ್ಲಾಪುರ, ಉ.ಕ. ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಈ ಎರಡೂ ಕ್ಲಸ್ಟರ್‌ನ ಕಾರ್ಯಕ್ರಮಗಳಿಗೆ ಡಾ॥ ಟಿ.ಪಿ. ಕೃಷ್ಣಕಾಂತ್, ನಿವೃತ್ತ ವಿಜ್ಞಾನಿ, ಸಿಎಫ್‌ಟಿಆರ್‌ಐ ಡಾ॥ ವಿ. ಗಿರೀಶ್ ವಿಜ್ಞಾನಿ, ಇಸ್ರೋ ಡಾ॥ ವಿನೋದ್ ಲಕ್ಕಪ್ಪನ್, ಸೈಂಟಿಸ್ಟ್ ಹಾಗೂ ಸಹಾಯಕ ನಿರ್ದೇಶಕರು, ವಿಷವಿಜ್ಞಾನ ವಿಭಾಗ ವಿಧಿ ವಿಜ್ಞಾನ ಪ್ರಯೋಗಾಲಯಶ್ರೀ ಪಿ.ಆರ್. ವಿಶ್ವನಾಥ್, ನಿವೃತ್ತ ವಿಜ್ಞಾನಿ, ಭಾರತೀಯ ಖಭೌತ ವಿಜ್ಞಾನ ಸಂಸ್ಥೆ, ಕೋರಮಂಗಲ, ಬೆಂಗಳೂರು ಇವರುಗಳು ವಿಜ್ಞಾನಿಗಳಾಗಿ ಭಾಗವಹಿಸಿದ್ದರು. ಬೆಳಗಾವಿ ಕ್ಲಸ್ಟರ್ ಕಾರ್ಯಕ್ರಮಕ್ಕೆ ಶ್ರೀ ರಾಜಶೇಖರ ಪಾಟೀಲ್ ಮತ್ತು ಧಾರವಾಡ ಕ್ಲಸ್ಟರ್ ಕಾರ್ಯಕ್ರಮಕ್ಕೆ ಡಾ॥ ವಿ.ಎನ್. ನಾಯಕ್ ಅವರು ಸಂಯೋಜಕರಾಗಿ ಕಾರ್ಯ ನಿರ್ವಹಿಸಿದ್ದರು.

**ಚಿತ್ರದುರ್ಗ ಕ್ಲಸ್ಟರ್‌ಗೆ** ಸಂಬಂಧಿಸಿದಂತೆ **2015–16 ರ "ಕರ್ನಾಟಕ ವಿಜ್ಞಾನ ವಿದ್ಯಾ ಜಾಗೃತಿ ವಿದ್ಯಾರ್ಥಿ– ವಿಜ್ಞಾನಿ ನೇರ ಸಂವಾದ" ಕಾರ್ಯಕ್ರಮವನ್ನು ದಿನಾಂಕ 10 ಮತ್ತು 11, ಅಕ್ಟೋಬರ್ 2015 ರಂದು ಕ್ರೀಡಾ ಸಭಾಂಗಣ, ಸ್ಪೋರ್ಟ್ಸ್ ಅಂಡ್ ಯೂತ್ ಸರ್ವಿಸ್ ಇಲಾಖೆ, ಒನಕೆ ಓಬವ್ವ ಸ್ಟೇಡಿಯಂ, ಚಿತ್ರದುರ್ಗ** ಇಲ್ಲಿ ಆಯೋಜಿಸಲಾಗಿತ್ತು. ಚಿತ್ರದುರ್ಗ ಕ್ಲಸ್ಟರ್‌ನಲ್ಲಿ ತುಮಕೂರು, ಮಧುಗಿರಿ ಶೈಕ್ಷಣಿಕ ಜಿಲ್ಲೆ ಮತ್ತು ದಾವಣಗೆರೆ ಜಿಲ್ಲೆಗಳು ಸೇರಿಕೊಳ್ಳುತ್ತವೆ. ಶ್ರೀ ಚಳ್ಳಕೆರೆ ಯರ್ರಿಸ್ವಾಮಿ, ಉಪಾಧ್ಯಕ್ಷರು, ಕರಾವಿಪ, ಇವರು ಸಂಯೋಜಕರಾಗಿ ಕಾರ್ಯ ನಿರ್ವಹಿಸಿದ್ದರು. ಡಾ॥ ಪಿ. ರಘೋತ್ತಮ್ ರಾವ್, ಎಮರಿಟಸ್ ಸೈಂಟಿಸ್ಟ್, ಡಿಆರ್‌ಡಿಓ, ಡಾ॥ ಇಂದ್ರಾಣಿ, ಪರಿಸರ ತಜ್ಞರು, ಬೆಂಗಳೂರು, ಡಾ. ಮುದಕವಿ ಜೆ.ಆರ್., ವಿಜ್ಞಾನಿ, ಕೆಮಿಕಲ್ ಇಂಜಿನಿಯರಿಂಗ್, ಭಾರತೀಯ ವಿಜ್ಞಾನ ಸಂಸ್ಥೆ, ಶ್ರೀ ಬಿ.ಎಚ್.ಎಂ. ದಾರುಕೇಶ್, ಸೈಂಟಿಸ್ಟ್–ಎಸ್.ಇ. ಥಿನ್ ಫಿಲ್ಮಂಸ್ ಅಂಡ್ ಸ್ಪೆಷಲ್ ಡಿವೈಸ್ ಸೆಕ್ಷನ್, ಇಸ್ರೋ ಸ್ಯಾಟಲೈಟ್ ಸೆಂಟರ್, ಬೆಂಗಳೂರು ಇವರುಗಳು ವಿಜ್ಞಾನಿಗಳಾಗಿ ಭಾಗವಹಿಸಿದ್ದರು.

**ಕೊಪ್ಪಳ ಕ್ಲಸ್ಟರ್‌ಗೆ** ಸಂಬಂಧಿಸಿದಂತೆ **2015–16 ರ "ಕರ್ನಾಟಕ ವಿಜ್ಞಾನ ವಿದ್ಯಾ ಜಾಗೃತಿ ವಿದ್ಯಾರ್ಥಿ– ವಿಜ್ಞಾನಿ ನೇರ ಸಂವಾದ" ಕಾರ್ಯಕ್ರಮವನ್ನು ದಿನಾಂಕ 8 ಮತ್ತು 9, ನವೆಂಬರ್ 2015 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ** ಇಲ್ಲಿ ಆಯೋಜಿಸಲಾಗಿತ್ತು. ಅದರಂತೆ ಕೊಪ್ಪಳ ಕ್ಲಸ್ಟರ್‌ನಲ್ಲಿ ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು 3 ಜಿಲ್ಲೆಗಳು ಒಳಗೊಂಡಿದ್ದವು. ಶ್ರೀ ಎಸ್.ಎಂ. ಕೊಟ್ರುಸ್ವಾಮಿ, ಸದಸ್ಯರು, ಕರಾವಿಪ ಇವರು ಕೊಪ್ಪಳ ಕ್ಲಸ್ಟರ್ ಸಂಯೋಜಕರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀ ನಾಗಭೂಷಣ, ಶ್ರೀ ಸಿ.ವಿ. ಏಳುಮಗ್ಗದ್ ಸೆಂಟರ್ ಫಾರ್ ನ್ಯಾನೋ ಅಂಡ್ ಸಾಫ್ಟ್ ಮ್ಯಾಟರ್ ಸೈನ್ಸಸ್, ಡಾ॥ ಕೆ.ಬಿ. ರಮೇಶ್, ವಿಜ್ಞಾನಿ, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಅಸ್ಟ್ರೋ ಫಿಸಿಕ್ಸ್, ಡಾ॥ ವಿನೋದ್ ಲಕ್ಕಪ್ಪನ್ ಸೈಂಟಿಸ್ಟ್ ಹಾಗೂ ಸಹಾಯಕ ನಿರ್ದೇಶಕರು, ವಿಷವಿಜ್ಞಾನ ವಿಭಾಗ, ವಿಧಿ ವಿಜ್ಞಾನ ಪ್ರಯೋಗಾಲಯ, ಇವರುಗಳು ವಿಜ್ಞಾನಿಗಳಾಗಿ ಭಾಗವಹಿಸಿದ್ದರು.

ಬೆಂಗಳೂರು ಕ್ಲಸ್ಟರ್‌ಗೆ ಸಂಬಂಧಿಸಿದಂತೆ 2015–16 ರ "ಕರ್ನಾಟಕ ವಿಜ್ಞಾನ ವಿದ್ಯಾ ಜಾಗೃತಿ ವಿದ್ಯಾರ್ಥಿ– ವಿಜ್ಞಾನಿ ನೇರ ಸಂವಾದ" ಕಾರ್ಯಕ್ರಮವನ್ನು ದಿನಾಂಕ 02 ಮತ್ತು 03 ನವೆಂಬರ್ 2015 ರಂದು ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ (ಬೆಸೆಂಟ್ ಪಾರ್ಕ್), ರೈಲ್ವೆ ನಿಲ್ದಾಣದ ಹತ್ತಿರ, ದೊಡ್ಡಬಳ್ಳಾಪುರ, (ಬೆಂಗಳೂರು ಗ್ರಾ. ಜಿಲ್ಲೆ) ಇಲ್ಲಿ ಆಯೋಜಿಸಲಾಗಿತ್ತು. ಅದರಂತೆ ಬೆಂಗಳೂರು ಕ್ಲಸ್ಟರ್‌ನಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ನಗರ (ದಕ್ಷಿಣ ಮತ್ತು ಉತ್ತರ) ಜಿಲ್ಲೆಗಳು ಒಳಗೊಂಡಿದ್ದವು. ಶ್ರೀ ಪ್ರಕಾಶ್ ಎಂ.ಬಿ, .ಉಪನ್ಯಾಸಕರು (ಜೀವಶಾಸ್ತ್ರ), ಸರ್ಕಾರಿ ಪದವಿಪೂರ್ವ ಕಾಲೇಜು ಇವರು ಸಂಯೋಜಕರಾಗಿ ಕಾರ್ಯ ನಿರ್ವಹಿಸಿದ್ದರು.

ಕೊಡಗು ಕ್ಲಸ್ಟರ್‌ಗೆ ಸಂಬಂಧಿಸಿದಂತೆ 2015–16 ರ "ಕರ್ನಾಟಕ ವಿಜ್ಞಾನ ವಿದ್ಯಾ ಜಾಗೃತಿ ವಿದ್ಯಾರ್ಥಿ– ವಿಜ್ಞಾನಿ ನೇರ ಸಂವಾದ" ಕಾರ್ಯಕ್ರಮವನ್ನು ದಿನಾಂಕ 18 ಮತ್ತು 19, ಜನವರಿ 2016 ರಂದು ರೈತ ಸಹಕಾರ ಭವನ, ಅತಿಥಿ ಹೋಟೆಲ್ ಬಳಿ, ಬಿ.ಎಂ. ರಸ್ತೆ, ಕುಶಾಲನಗರ, ಕೊಡಗು ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಕೊಡಗು ಕ್ಲಸ್ಟರ್‌ನಲ್ಲಿ ಕೊಡಗು, ಉಡುಪಿ, ದಕ್ಷಿಣ ಕನ್ನಡ 3 ಜಿಲ್ಲೆಗಳು ಒಳಗೊಂಡಿರುತ್ತವೆ. ಕೊಡಗು ಕ್ಲಸ್ಟರ್‌ಗೆ ಶ್ರೀ ಟಿ.ಜಿ. ಪ್ರೇಮಕುಮಾರ್, ಜಂಟಿ ಕಾರ್ಯದರ್ಶಿ, ಕರಾವಿಪ ಇವರು ಸಂಯೋಜಕರಾಗಿ ಕಾರ್ಯನಿರ್ವಹಿಸಿದ್ದರು. ಡಾ॥ ಹರೀಶ್ ಭಟ್, ಭಾರತೀಯ ವಿಜ್ಞಾನ ಮಂದಿರ, ಶ್ರೀ ಮಂಜುನಾಥ್, ಬಳ್ಳಾರಿ, ಡಾ॥ ಪ್ರಸಾದ್, ನಿವೃತ್ತ ವಿಜ್ಞಾನಿ, ಇಸ್ರೋ, ಬೆಂಗಳೂರು ಇವರುಗಳು ವಿಜ್ಞಾನಿಗಳಾಗಿ ಭಾಗವಹಿಸಿದ್ದರು.

## 6. ಕರಾವಿಪ ಸಂಸ್ಥಾಪನಾ ದಿನಾಚರಣೆ

ಕರಾವಿಪದ 35ನೇ ಸಂಸ್ಥಾಪನಾ ದಿನಾಚರಣೆಯನ್ನು ರಾಜ್ಯದ ಎಲ್ಲ 34 ಜಿಲ್ಲಾ ಸಮಿತಿಗಳಲ್ಲಿ ನವೆಂಬರ್ 11, 2015ರಂದು ಆಚರಿಸಲಾಯಿತು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವು ಸಂಸ್ಥೆಯ ಸ್ಥಾಪಕರು ಹಾಗೂ ಪರಿಷತ್ತಿನ ಏಳಿಗೆಗಾಗಿ ದುಡಿದ ಮಹನೀಯರನ್ನು ಸ್ಮರಿಸುವುದಾಗಿದೆ.

7. **ವಿಜ್ಞಾನ ಅರಿವು ಕಾರ್ಯಕ್ರಮ (ವಿಜ್ಞಾನೇತರ ಶಿಕ್ಷಕರ ತರಬೇತಿ)**

ನವೆಂಬರ್ 13 ಹಾಗೂ 14, 2015ರಂದು ತುಮಕೂರಿನ ಡಯಟ್‌ನಲ್ಲಿ ವಿಜ್ಞಾನೇತರ ಶಿಕ್ಷಕರಿಗೆ ವಿಜ್ಞಾನದ ಅರಿವು (ವೈಜ್ಞಾನಿಕ ಮನೋಭಾವ, ಭೂಗರ್ಭಶಾಸ್ತ್ರ, ಖಗೋಳ ವಿಜ್ಞಾನ, ಜೀವ ವಿಜ್ಞಾನ ಹಾಗೂ ಪಾತ್ಯಕ್ಷಿಗಳು) ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ರಾಜ್ಯದ ನಾನಾ ಜಿಲ್ಲೆಗಳಿಂದ ಅಂದಾಜು 35 ಶಿಕ್ಷಕರು ಪಾಲ್ಗೊಂಡಿದ್ದರು. ನವೆಂಬರ್ 13, 2015 ಕರ್ನಾಟಕ ಬಂದ್ ಇದ್ದು, ಸ್ಥಳೀಯ ಶಿಕ್ಷಕರು ಭಾಗವಹಿಸಲಾಗಲಿಲ್ಲವಾದ್ದರಿಂದ ಅವರಿಗೆ (ತುಮಕೂರು ಮತ್ತು ಮಧುಗಿರಿ) ಜನವರಿ 2016ರಂದು ತುಮಕೂರಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

8. **23ನೇ ಅಖಿಲ ಕರ್ನಾಟಕ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ 2015**

ರಾಷ್ಟ್ರೀಯ ಮಕ್ಕಳ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿ, ಭಾರತ ಸರ್ಕಾರ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ, ಸಾರ್ವಜನಿಕ ಶಿಕ್ಷಣ ಇಲಾಖೆ, "ಸ್ಟೆಪ್ಸ್" ಡಾ॥ ಸ.ಜ. ನಾಗಲೋಟಿಮಠ ವಿಜ್ಞಾನ ಕೇಂದ್ರ, ಗೋಕಾಕ್ ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಇವುಗಳ ಸಂಯುಕ್ತ ಆಶ್ರಯದಲ್ಲಿ 23ನೇ ರಾಜ್ಯಮಟ್ಟದ ಮಕ್ಕಳ ವಿಜ್ಞಾನ ಸಮಾವೇಶವನ್ನು ದಿನಾಂಕ 27–29, ನವೆಂಬರ್ 2015ರಂದು ಗೋಕಾಕದ ಸತೀಶ್ ಶುಗರ್ಸ್ ಅಕಾಡೆಮಿ ಕಾಲೇಜು, ಎನ್.ಎಸ್.ಎಫ್. ಆವರಣದಲ್ಲಿ ಆಯೋಜಿಸಲಾಗಿತ್ತು.

ದಿನಾಂಕ 27.11.2015ರಂದು ಬೆಳಿಗ್ಗೆ 11.00 ಗಂಟೆಗೆ ಉದ್ಘಾಟನೆ ಜರುಗಿತು. ಚುನಾವಣಾ ನೀತಿ ಸಂಹಿತೆ ಜಾರಿಯಾದ್ದರಿಂದ ಜನ ಪ್ರತಿನಿಧಿಗಳು ಭಾಗವಹಿಸಿರಲಿಲ್ಲ. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಎಂ.ಎಸ್. ಕುಲಕರ್ಣಿ, ಡೀನ್, ರಾಣಿ ಚೆನ್ನಮ್ಮ ಕೃಷಿ ವಿಶ್ವವಿದ್ಯಾಲಯ, ಬೆಳಗಾವಿ ಇವರು ನೆರವೇರಿಸಿದರು. ಶ್ರೀ ಎಂ.ಡಿ. ಬಳ್ಳಾರಿ, ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗೋಕಾಕ್ ಇವರು ಮುಖ್ಯ ಅತಿಥಿಗಳಾಗಿ, ಶ್ರೀ ದೊಡ್ಡಬಸಪ್ಪ, ಉಪಾಧ್ಯಕ್ಷರು, ಕರಾವಿಪ, ಹಾಗೂ ಗೌರವ ಕಾರ್ಯದರ್ಶಿ, ಡಾ॥ ವಸುಂಧರಾ ಭೂಪತಿ, ಧಾರವಾಡದ ಬಾಲವಿಕಾಸ ಅಕಾಡೆಮಿಯ, ಯೋಜನಾ ಅಧಿಕಾರಿಗಳು, ಹಾಗೂ ರಾಜ್ಯ ಸಂಯೋಜಕರಾದ ಶ್ರೀ ಪಂಡಿತ್ ಕೆ. ಬಾಳೂರೆ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಇದೇ ದಿನ 'ಸರಳ ಪ್ರಯೋಗಗಳು' ಕುರಿತು ಅನುವಾದಿಸಿದ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಮಧ್ಯಾಹ್ನದ ಅವಧಿಯಿಂದ ವಿದ್ಯಾರ್ಥಿಗಳಿಂದ 20 ಯೋಜನೆಗಳು ಮಂಡನೆಯಾದವು. ಪವಾಡಗಳ ರಹಸ್ಯ ಬಯಲು ಕಾರ್ಯಕ್ರಮವನ್ನು ಶ್ರೀ ಹುಲಿಕಲ್ ನಟರಾಜ್ ನಡೆಸಿಕೊಟ್ಟರು.

ಕೊನೆಯ ದಿನ ಜಿಲ್ಲಾ ಉಸ್ತುವಾರಿ ಮಂತ್ರಿಯವರಾದ ಶ್ರೀ ಸತೀಶ್ ಜಾರಕಿಹೊಳಿ ಅವರು ಸಕ್ರಿಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕರಾವಿಪ ಅಧ್ಯಕ್ಷರಾದ ಶ್ರೀ ಎಸ್.ವಿ. ಸಂಕನೂರ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಶ್ರೀಮತಿ ದಾಕ್ಷಾಯಣಿ ಬಸವರಾಜ, ಬಾಲವಿಕಾಸ ಅಕಾಡೆಮಿ, ಧಾರವಾಡ ಅವರು ಅತಿಥಿಗಳಾಗಿ ಭಾಗವಹಿಸಿದ್ದರು. ಹಿರಿಯ ಕರಾವಿಪ ಸದಸ್ಯರಾದ ಪ್ರೊ॥ ಎ.ಕೆ. ಭಟ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಖ್ಯಾತ ವಿಜ್ಞಾನಿಯಾದ ಆಲ್ಬರ್ಟ್ ಐನ್‌ಸ್ಟೈನ್ ಕುರಿತು ಮಾತನಾಡಿದರು. ಶ್ರೀ ಜಿ.ಬಿ. ಮನ್ನಿಕೇರಿ, ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ಇವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಸ್ತುತ 2015ನೇ ಸಾಲಿನ ರಾಜ್ಯಮಟ್ಟದ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ಒಟ್ಟು 301 ಯೋಜನೆಗಳು ಮಂಡನೆಯಾದವು.

1. **ನಗರ ವಿಭಾಗ (ಕಿರಿಯ) – 60 ಯೋಜನೆಗಳು**
2. **ನಗರ ವಿಭಾಗ (ಹಿರಿಯ) – 86 ಯೋಜನೆಗಳು**
3. **ಗ್ರಾಮೀಣ ವಿಭಾಗ (ಕಿರಿಯ) – 62 ಯೋಜನೆಗಳು**
4. **ಗ್ರಾಮೀಣ ವಿಭಾಗ (ಹಿರಿಯ) – 93 ಯೋಜನೆಗಳು**

---

**ಒಟ್ಟು 301 ಯೋಜನೆಗಳು**

ರಾಜ್ಯಮಟ್ಟದ ಸಮಾವೇಶದಲ್ಲಿ ಮಂಡಿಸಲ್ಪಟ್ಟ 301 ಯೋಜನೆಗಳಲ್ಲಿ ಅತ್ಯುತ್ತಮ ಯೋಜನೆಗಳೆಂದು ನಿರ್ಣಯಿಸಲ್ಪಟ್ಟ 30 ಯೋಜನೆಗಳನ್ನು ಮಂಡಿಸಿದ ವಿದ್ಯಾರ್ಥಿ/ವಿದ್ಯಾರ್ಥಿಗಳನ್ನು 2015ರ ಡಿಸೆಂಬರ್ 28–30 ಗಳಂದು ಹರಿಯಾಣಾ ರಾಜ್ಯದ ಚಂಡಿಗಢದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಮಕ್ಕಳ ವಿಜ್ಞಾನ ಸಮಾವೇಶಕ್ಕಾಗಿ ಆಯ್ಕೆಗೊಳಿಸಲಾಯಿತು.

9. **ಯುವ ವಿಜ್ಞಾನಿ ಪ್ರಶಸ್ತಿ ಪ್ರದಾನ ಯೋಜನೆ.**

ಜಿಲ್ಲಾ ಮಟ್ಟದ ಯುವ ವಿಜ್ಞಾನಿ ಸ್ಪರ್ಧೆಯನ್ನು ದಿನಾಂಕ *9-1-2016* ರಂದು ಶನಿವಾರ ರಾಜ್ಯದ 34 ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ 1000 ವಿದ್ಯಾರ್ಥಿಗಳು ರಾಜ್ಯದಾದ್ಯಂತ ಭಾಗವಹಿಸಿದ್ದರು. ಜಿಲ್ಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ಯುವ ವಿಜ್ಞಾನಿಗಳು 2016ರ ಜನವರಿಯಲ್ಲಿ ಜರುಗುವ ರಾಜ್ಯಮಟ್ಟದ ವಿಜ್ಞಾನ ಸಮಾವೇಶದಲ್ಲಿ ಭಾಗವಹಿಸಲು ಅರ್ಹತೆ ಪಡೆದಿದ್ದರು.

ರಾಜ್ಯ ಮಟ್ಟದ ಸಮಾವೇಶವನ್ನು ದಿನಾಂಕ 23 ರಿಂದ 25 ಜನವರಿ 2016 ರಂದು ಶಿವಮೊಗ್ಗ ಜಿಲ್ಲೆಯ ಅಂಬೇಡ್ಕರ್ ಭವನ ಇಲ್ಲಿ ಆಯೋಜಿಸಲಾಗಿತ್ತು. ರಾಜ್ಯದ 34 ಜಿಲ್ಲೆಗಳಿಂದ 97 ವಿದ್ಯಾರ್ಥಿಗಳು ಭಾಗವಹಿಸಿದ್ದರು. ದಿನಾಂಕ 24–1–2016 ರಂದು ಪರಿಸರ ಜಾಥಾ ಮತ್ತು ಶ್ರೀ ಹಿರಿಯಣ್ಣ, ವಿಜ್ಞಾನಿ, ಇಸ್ರೋ, ಬೆಂಗಳೂರು ಇವರಿಂದ ವಿದ್ಯಾರ್ಥಿಗಳಿಗೆ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

**ರಾಜ್ಯ ಮಟ್ಟದ ಯುವ ವಿಜ್ಞಾನಿ ಸ್ಪರ್ಧೆಯ ವಿಜೇತರ ಪಟ್ಟಿ**

| | |
|---|---|
| 1 | ಅನಿಕೇತ ಶೆಣೈ<br>ಶ್ರೀ ವೆಂಕಟರಮಣ ಇಂಗ್ಲೀಷ ಮಾಧ್ಯಮ ಶಾಲೆ<br>ಕುಂದಾಪೂರ, ಜಿಲ್ಲೆ : ಉಡುಪಿ<br>ಮೊ : 9986232297 |
| 2. | ಮಹಾವೀರ ಚೌಗಲಾ<br>ಭರತೇಶ ಸಂಯುಕ್ತ ಪ. ಪೂ.<br>ಮಹಾವಿದ್ಯಾಲಯ (ಪ್ರೌಢಶಾಲಾ ವಿಭಾಗ)<br>ಬೆಲ್ಲದ ಬಾಗೇವಾಡಿ<br>ತಾ : ಹುಕ್ಕೇರಿ, ಜಿಲ್ಲೆ : ಬೆಳಗಾವಿ<br>ಮೊ : 7760788934 |
| 3. | ಇಂಧೂದರ ಬಿ.<br>ಶ್ರೀ ಸಿದ್ಧಗಂಗಾ ಪ್ರೌಢಶಾಲೆ ಬಿ. ಎಚ್. ರೋಡ್<br>ತುಮಕೂರು<br>ಮೊ : 9886036919 |

**10. ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ಅಂತರ ಕಾಲೇಜು ಕನ್ನಡ ವಿಜ್ಞಾನ ಉಪನ್ಯಾಸ ಸ್ಪರ್ಧೆ 2015–16**

ಜಿಲ್ಲಾ ಮಟ್ಟದ ಅಂತರ ಕಾಲೇಜು ಕನ್ನಡ ವಿಜ್ಞಾನ ಉಪನ್ಯಾಸ ಸ್ಪರ್ಧೆ 2015 ನ್ನು ರಾಜ್ಯಾದಾದ್ಯಂತ ದಿನಾಂಕ 29–1–2016 ರಂದು ಆಯೋಜಿಸಲಾಗಿತ್ತು. ಪ್ರತಿ ಜಿಲ್ಲೆಯಲ್ಲಿ ಅಂದಾಜು 25 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರತಿ ಜಿಲ್ಲೆಯಲ್ಲಿ 4 ವಿಷಯಗಳಿಗೆ ಸಂಬಂಧಿಸಿದಂತೆ 4 ವಿದ್ಯಾರ್ಥಿಗಳನ್ನು ಆಯ್ಕೆಮಾಡಲಾಗಿದೆ.

ರಾಜ್ಯ ಮಟ್ಟದ ಕಾರ್ಯಕ್ರಮವನ್ನು ದಿನಾಂಕ 3 ಮತ್ತು 4 ಮಾರ್ಚ್ 2016 ರಂದು ಹೋಮ್ ಸೈನ್ಸ್ ಕಾಲೇಜು, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

**11. ಸರ್. ಸಿ.ವಿ. ರಾಮನ್ ರಾಜ್ಯಮಟ್ಟದ 'ಥಟ್ ಅಂತ ಹೇಳಿ' ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ 2015–16**

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್.ಇ.ಆರ್.ಟಿ.) ಹಾಗೂ ಚಂದನ ವಾಹಿನಿ ದೂರದರ್ಶನ ಕೇಂದ್ರ, ಬೆಂಗಳೂರು ಇವುಗಳ ಸಂಯುಕ್ತ ಆಶ್ರಯದಲ್ಲಿ 2015–16ನೇ ಸಾಲಿನ ಸರ್. ಸಿ.ವಿ. ರಾಮನ್ ರಾಜ್ಯಮಟ್ಟದ 'ಥಟ್ ಅಂತ ಹೇಳಿ' ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮವನ್ನು 08.01.2016 ರಿಂದ 01.02.2016ರ ಅವಧಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಂಗವಾಗಿ ಶೈಕ್ಷಣಿಕ ಜಿಲ್ಲೆಗಳೂ ಸೇರಿದಂತೆ ರಾಜ್ಯದ ಒಟ್ಟು 34 ಜಿಲ್ಲೆಗಳಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಂದ ಸೂಚಿಸಲ್ಪಟ್ಟ ಒಟ್ಟು 81 ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ದಿನಾಂಕ 7.1.2016 (ಗುರುವಾರ) ರಂದು ಪದ್ಮನಾಭ ನಗರದಲ್ಲಿರುವ ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಆವರಣದಲ್ಲಿ ಲಿಖಿತ ಸುತ್ತಿನ ಪರೀಕ್ಷೆಯನ್ನು ಕೈಗೊಳ್ಳಲಾಯಿತು. ಈ ಲಿಖಿತ ಸುತ್ತಿನ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಒಟ್ಟು 54 ವಿದ್ಯಾರ್ಥಿಗಳಿಗೆ ದಿನಾಂಕ 8, ಹಾಗೂ 9 ಫೆಬ್ರವರಿ 2016 ಮತ್ತು ದಿನಾಂಕ 30.01.2016 ಗಳಂದು ಮೌಖಿಕ ಸುತ್ತಿನ 18 ಸುತ್ತುಗಳ ಚಿತ್ರೀಕರಣದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಯಿತು. ಅದರಂತೆ ದಿನಾಂಕ 1 ಮತ್ತು 2 ಫೆಬ್ರವರಿ 2016ಗಳಂದು 19 ರಿಂದ 27ನೇ ಸುತ್ತಿನ (ಕಾಲಂತ್ಯ ಸುತ್ತು, ಉಪಾಂತ್ಯ ಸುತ್ತು ಹಾಗೂ ಅಂತಿಮ ಸುತ್ತು) ಕಂತುಗಳ ಚಿತ್ರೀಕರಣವನ್ನು ಬೆಂಗಳೂರಿನ ದೂರದರ್ಶನ ಕೇಂದ್ರದ ಸ್ಟುಡಿಯೋದಲ್ಲಿ ಚಿತ್ರೀಕರಿಸಲಾಯಿತು. ಪ್ರತಿ ಕಂತಿನಲ್ಲಿಯೂ ಒಟ್ಟು 12 ಪ್ರಶ್ನೆಗಳಿದ್ದು, ಕೊನೆಯ ಎರಡು ಪ್ರಶ್ನೆಗಳು ವಿಜ್ಞಾನ ಪ್ರಯೋಗ ಪ್ರಾತ್ಯಕ್ಷಿಕೆಯನ್ನು ಆಧರಿಸಿದ್ದವು. ಎಲ್ಲ

27 ಕಂತುಗಳಲ್ಲಿನ ಪ್ರತಿ ಪ್ರಶ್ನೆಗೂ ಸರಿಯಾದ ಉತ್ತರ ನೀಡಿದ ವಿದ್ಯಾರ್ಥಿಗಳಿಗೆ ಕರಾವಿಪ ಪ್ರಕಟಿತ ವಿಜ್ಞಾನ ಪುಸ್ತಕಗಳನ್ನು ನೀಡಿ ಪುರಸ್ಕರಿಸಲಾಯಿತು.

ಅಂತಿಮ ಸುತ್ತಿನ ಚಿತ್ರೀಕರಣ ದಿನದಂದು ದಿನಾಂಕ (02.02.2016) ಮುಖ್ಯ ಅತಿಥಿಗಳಾಗಿ ರಾಜೀವಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಉಪಕುಲಪತಿ ಡಾ॥ ರವೀಂದ್ರನಾಥ ಭಾಗವಹಿಸಿ ವಿಜೇತ ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ, ಪುಸ್ತಕ ಹಾಗೂ ಸ್ಮರಣಿಕೆಗಳನ್ನು ನೀಡಿ ಗೌರವಿಸಿದರು. ದಿನಾಂಕ 8.1.2016ರಂದು ನಡೆದ ಉದ್ಘಾಟನಾ ಸಮಾರಂಭದಲ್ಲಿ ಇಸ್ರೋ ನಿವೃತ್ತ ವಿಜ್ಞಾನಿ ಡಾ. ಎಸ್.ಕೆ. ಶಿವಕುಮಾರ್, ಕರಾವಿಪ ಅಧ್ಯಕ್ಷರಾದ ಶ್ರೀ ಎಸ್.ವಿ. ಸಂಕನೂರ, ಗೌರವ ಕಾರ್ಯದರ್ಶಿ ಡಾ॥ ವಸುಂಧರಾ ಭೂಪತಿ, ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮದ ರಾಜ್ಯ ಸಂಯೋಜಕರಾದ ಶ್ರೀ ಆರ್.ಎಸ್.ಪಾಟೀಲ ಇವರು ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

2016ನೇ ಸಾಲಿನ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಒಟ್ಟು 27 ಕಂತುಗಳಲ್ಲಿ ಚಿತ್ರೀಕರಣಗೊಂಡಿರುವ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯು ದಿನಾಂಕ 21 ಜನವರಿ 2016ರಿಂದ 26 ಫೆಬ್ರವರಿ 2016ರವರೆಗೆ (ಸೋಮವಾರದಿಂದ ಶುಕ್ರವಾರ) ಪ್ರತಿದಿನ 9.30 ರಿಂದ 10.00 ಗಂಟೆಯವರೆಗೆ ಪ್ರಸಾರಗೊಳ್ಳಲಿದೆ.

ಅಂತಿಮ ಹಂತದ ಸುತ್ತಿನಲ್ಲಿ ಪ್ರಥಮ ಸ್ಥಾನ ಪಡೆದು ರೂ.10,000/–ಗಳ ನಗದು ಬಹುಮಾನ, ದ್ವಿತೀಯ ಸ್ಥಾನ ಪಡೆದು ರೂ.7,500/–ಗಳ ನಗದು ಬಹುಮಾನ, ತೃತೀಯ ಬಹುಮಾನವಾಗಿ ರೂ.5,000/–ಗಳ ನಗದು ಬಹುಮಾನವನ್ನು ಪಡೆದ ವಿದ್ಯಾರ್ಥಿಗಳ ವಿವರ ಈ ಕೆಳಗಿನಂತಿದೆ.

| | |
|---|---|
| ಪ್ರಥಮ ಬಹುಮಾನ : | ಮೊಹಮ್ಮದ್ ಸೊಹೇಲ್<br>ಸರ್ವಜ್ಞ ಪ್ರೌಢಶಾಲೆ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ. (ದೂ : 9972267259) |
| ದ್ವಿತೀಯ ಬಹುಮಾನ : | ಸಿ.ವಿ. ವಿನಿತ<br>ಕೆ.ಎಚ್.ಇ.ಟಿ. ಪ್ರೌಢಶಾಲೆ, ಕದ್ರಾ, ಉತ್ತರ ಕನ್ನಡ ಜಿಲ್ಲೆ (ದೂ : 9480039140) |
| ತೃತೀಯ ಬಹುಮಾನ : | ರಘುನಂದನ ಮಳಗಿ<br>ಗೆಳೆಯರ ಬಳಗ ಪ್ರೌಢಶಾಲೆ, ಹಾವೇರಿ, ಹಾವೇರಿ ಜಿಲ್ಲೆ (ದೂ : 7204858552) |

**12. ವೈಜ್ಞಾನಿಕ ಜಾಗೃತಿ ಹಾಗೂ ಪವಾಡ ಬಯಲು ಕಾರ್ಯಕ್ರಮ.**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನಿಂದ ದಿನಾಂಕ 15.02.2016ರಂದು ಬೆಂಗಳೂರಿನ ಆಯ್ದ 2 ಸ್ಥಳಗಳಲ್ಲಿ (ಸರ್ಕಾರಿ ಪ್ರಾಥಮಿಕ ಶಾಲೆ, ಗೋವಿಂದರಾಜನಗರ, ಮಾಗಡಿ ರಸ್ತೆ ಹಾಗೂ ಹಿರಿಯ ಪ್ರಾಥಮಿಕ ಶಾಲೆ, ಅಶೋಕ ಶಿಶುವಿಹಾರ ಆವರಣ, ಚಾಮರಾಜಪೇಟೆ, ಬೆಂಗಳೂರು). ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗಾಗಿ ಪವಾಡ ಬಯಲು ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಖ್ಯಾತ ವಿಚಾರವಾದಿಯಾದ ಡಾ. ನರೇಂದ್ರ ನಾಯಕ್ ಪವಾಡಬಯಲು ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟರಲ್ಲದೇ ವೈಜ್ಞಾನಿಕ ಜಾಗೃತಿಯ ಮಹತ್ವವನ್ನು ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ಪಾಲಕರಿಗೆ ಮನದಟ್ಟಾಗುವಂತೆ ತಿಳಿಸಿಕೊಟ್ಟರು.

13. **ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ :**

ಧಾರವಾಡ ವಿಭಾಗ ಮಟ್ಟದ ಸ್ಪರ್ಧೆಯನ್ನು ದಿನಾಂಕ 08–03–2016ರಂದು ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸ0ಸ್ಥೆ, ಹುಬ್ಬಳ್ಳಿ, ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ಶ್ರೀ ಸುಣಗಾರ್ ಎಂ.ಎಸ್. ಪ್ರಾಂಶುಪಾಲರು, ಎಚ್.ಎಸ್.ಕೆ. ವಿಜ್ಞಾನ ಕಾಲೇಜು, ವಿದ್ಯಾನಗರ, ಹುಬ್ಬಳ್ಳಿ, ಧಾರವಾಡ ಜಿಲ್ಲೆ ಇವರು ಧಾರವಾಡ ವಲಯ ಸಂಯೋಜಕರಾಗಿ ಕಾರ್ಯನಿರ್ವಹಿಸಿದ್ದರು.

ಮೈಸೂರು ವಿಭಾಗ ಮಟ್ಟದ ಸ್ಪರ್ಧೆಯನ್ನು ದಿನಾಂಕ 3–3–2016 ರಂದು ಸರ್ಕಾರಿ ವಿಜ್ಞಾನ ಕಾಲೇಜು, ಸಾಲಗಾಮೆ ರಸ್ತೆ, ಹಾಸನ ಇಲ್ಲಿ ಆಯೋಜಿಸಲಾಗಿತ್ತು. ಮೈಸೂರು ವಿಭಾಗದ ಸಂಯೋಜಕರಾಗಿ ಶ್ರೀ ಶ್ರೀನಿವಾಸ ನಟೇಕರ ಅವರು ಕಾರ್ಯನಿರ್ವಹಿಸಿದ್ದರು.

ಮಂಗಳೂರು ವಿಭಾಗ ಮಟ್ಟದ ಸ್ಪರ್ಧೆಯನ್ನು ದಿನಾಂಕ 8–3–2016 ರಂದು ಮಹಾವೀರ ಕಾಲೇಜು, ಮೂಡಬಿದರೆ, ಉಡುಪಿ ಇಲ್ಲಿ ಆಯೋಜಿಸಲಾಗಿತ್ತು. ಮಂಗಳೂರು ವಿಭಾಗದ ಸಂಯೋಜಕರಾಗಿ ಶ್ರೀ ದಿನೇಶ್ ಶೆಟ್ಟಿಗಾರ್ ಅವರು ಕಾರ್ಯನಿರ್ವಹಿಸಿದ್ದರು.

ಕಲಬುರ್ಗಿ ವಿಭಾಗ ಮಟ್ಟದ ಸ್ಪರ್ಧೆಯನ್ನು ದಿನಾಂಕ 29-3-2016 ರಂದು ಮುರುಘರಾಜೇಂದ್ರ ಬಿ.ಎಡ್. ಕಾಲೇಜು, ಕಲಬುರ್ಗಿ ಇಲ್ಲಿ ಆಯೋಜಿಸಲಾಗಿತ್ತು. ಕಲಬುರ್ಗಿ ವಿಭಾಗದ ಸಂಯೋಜಕರಾಗಿ ಶ್ರೀ ಗಿರೀಶ್ ಬಿ. ಕಡ್ಲೇವಾಡ ಅವರು ಕಾರ್ಯನಿರ್ವಹಿಸಿದ್ದರು.

ಬೆಂಗಳೂರು ವಿಭಾಗ ಮಟ್ಟದ ಸ್ಪರ್ಧೆಯನ್ನು ದಿನಾಂಕ 26-3-2016 ರಂದು ಶ್ರೀ ದಯಾನಂದ ಸಾಗರ ವಿದ್ಯಾ ಸಂಸ್ಥೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಬೆಂಗಳೂರು ವಿಭಾಗದ ಸಂಯೋಜಕರಾಗಿ ಶ್ರೀ ಟಿ.ಬಿ. ನಿರಂಜನ ಅವರು ಕಾರ್ಯನಿರ್ವಹಿಸಿದ್ದರು.

ಶಿವಮೊಗ್ಗ ವಿಭಾಗ ಮಟ್ಟದ ಸ್ಪರ್ಧೆಯನ್ನು ದಿನಾಂಕ 19-3-2016 ರಂದು ಐ.ಡಿ.ಎಸ್.ಜಿ. ಕಾಲೇಜು, ಚಿಕ್ಕಮಗಳೂರು ಇಲ್ಲಿ ಆಯೋಜಿಸಲಾಗಿತ್ತು. ಶಿವಮೊಗ್ಗ ವಿಭಾಗದ ಸಂಯೋಜಕರಾಗಿ ಶ್ರೀ ಟಿ.ಜಿ. ಕೃಷ್ಣಮೂರ್ತಿ ರಾಜ್ ಅರಸ್ ಅವರು ಕಾರ್ಯನಿರ್ವಹಿಸಿದ್ದರು.

ರಾಜ್ಯ ಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆಯನ್ನು ದಿನಾಂಕ 1 ಮತ್ತು 2 ಏಪ್ರಿಲ್ 2016 ರಂದು ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್, ಮಾನಸ ಗಂಗೋತ್ರಿ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು.

**14. ರಾಜ್ಯ ಮಟ್ಟದ ಮಹಿಳಾ ವಿಜ್ಞಾನ ಸಮಾವೇಶ**

2015-16ನೇ ಸಾಲಿನ ರಾಜ್ಯ ಮಟ್ಟದ ಮಹಿಳಾ ವಿಜ್ಞಾನ ಸಮಾವೇಶ ದಿನಾಂಕ 22-23, ಮಾರ್ಚ್ 2016 ಗಳಂದು ರಾಯಚೂರು ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಆಯೋಜಿಸಲಾಗಿತ್ತು. ದಿನಾಂಕ 22 ಮಾರ್ಚ್ 2016 ರಂದು ಪ್ರೇಕ್ಷಾಗೃಹದಲ್ಲಿ ಆಯೋಜನೆಗೊಂಡ ಸಮಾವೇಶದ ಉದ್ಘಾಟನೆಯನ್ನು ಕರ್ನಾಟಕ ಸರ್ಕಾರದ ಮಾಜಿ ಸಚಿವರು ಹಾಗೂ ಹಿರಿಯ ಮಹಿಳಾ ಸಾಹಿತಿ ಡಾ॥ ಬಿ.ಟಿ. ನಾಯಕ್ ನೆರವೇರಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ರಾಯಚೂರು ವೈದ್ಯಕೀಯ ಮಹಾವಿದ್ಯಾಲಯದ (ರಿಮ್ಸ್) ಡೀನ್ ಡಾ॥ ಕವಿತಾ ಪಾಟೀಲ್, ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕರಾದ ಡಾ॥ ಎಮ್.ಕೆ. ನಾಯಕ್ ಭಾಗವಹಿಸಿದ್ದರು. ಇದಲ್ಲದೆ ಕರಾವಿಪದ ಉಪಾಧ್ಯಕ್ಷರಾದ ಶ್ರೀ ಚಳ್ಳಕೆರೆ ಯರ್‍ರಿಸ್ವಾಮಿ, ಖಜಾಂಚಿ ಶ್ರೀ ಗಿರೀಶ ಕಡ್ಲೇವಾಡ, ಕರಾವಿಪ ಕಾರ್ಯಕಾರಿ ಸದಸ್ಯರಾದ ಡಾ॥ ಕುಂಟೆಪ್ಪ ಗೌರೀಪುರ ಹಾಗೂ ಗೌರವ ಕಾರ್ಯದರ್ಶಿಗಳಾದ ಡಾ॥ ವಸುಂಧರಾ ಭೂಪತಿ ಅವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಮಾವೇಶದ ಅಂಗವಾಗಿ 2 ದಿನಗಳ ಕಾಲ ಸಂಯೋಜಿಸಲಾದ ತಾಂತ್ರಿಕ ಗೋಷ್ಠಿಗಳಲ್ಲಿ ಬೆಂಗಳೂರಿನ ಹಿರಿಯ ವಿಜ್ಞಾನ ಸಂವಹನಕಾರರು ಹಾಗೂ ಜೈವಿಕ ವಿಜ್ಞಾನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕಿ ಡಾ॥ ಎನ್.ಎಸ್. ಲೀಲಾ "ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆ" ಕುರಿತಾಗಿ ಉಪನ್ಯಾಸ ನೀಡಿದರಲ್ಲದೆ ಸಂವಾದದಲ್ಲಿ ಭಾಗವಹಿಸಿದ್ದರು. ಅದರಂತೆ ಭಾರತೀಯ ಮಹಿಳಾ ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ಎ. ಜ್ಯೋತಿ "ಮೌಢ್ಯ ಪ್ರತಿಬಂಧಕ ಕಾನೂನು" ಕುರಿತಾಗಿ, ರಾಯಚೂರಿನ ನಿವೃತ್ತ ಮನೋವೈದ್ಯ ಡಾ॥ ವಿ.ಎ. ಮಾಲಿಪಾಟೀಲ್ ಇವರು "ಮಹಿಳೆ ಮತ್ತು ಮಾನಸಿಕ ಒತ್ತಡ" ಕುರಿತಾಗಿ ವಿಷಯ ಮಂಡನೆ ಮಾಡಿದರಲ್ಲದೆ ತಾಂತ್ರಿಕ ಸಂವಾದಗಳಲ್ಲಿ ಭಾಗವಹಿಸಿ ಪ್ರತಿನಿಧಿಗಳ ಕುತೂಹಲಕಾರಿ ಪ್ರಶ್ನೆಗಳಿಗೆ ಉತ್ತರಿಸಿದರು.

ಸಮಾವೇಶದ 2ನೇ ದಿನ ಹಿರಿಯ ವಿಜ್ಞಾನ ಸಂವಹನಕಾರರಾದ ಡಾ॥ ಅಬ್ದುಲ್ ರೆಹಮಾನ್ ಪಾಷ "ಮಾಧ್ಯಮ ಮತ್ತು ಮೌಢ್ಯ" ಕುರಿತು ಉಪನ್ಯಾಸ ನೀಡಿದರು. ಅದರಂತೆ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಡಾ॥ ಮೌನೇಶ್ವರಿ ಕಮ್ಮಾರ "ಕೃಷಿ ಮತ್ತು ಮಹಿಳೆ" ಕುರಿತಾಗಿ, ರಾಷ್ಟ್ರೀಯ ವೈಮಾನಾಂತರಿಕ್ಷ ಸಂಶೋಧನಾ ಸಂಸ್ಥೆ (ಎನ್.ಎ.ಎಲ್)ನ ನಿವೃತ್ತ ವಿಜ್ಞಾನಿ ಶ್ರೀಮತಿ ಜಿ.ವಿ. ನಿರ್ಮಲಾ ಇವರು "ವಿದ್ಯುನ್ಮಾನ ಸಾಧನಗಳು - ಪೂರಕವೇ? ಮಾರಕ?" ಎಂಬ ಶೀರ್ಷಿಕೆಯಡಿ ಅಧ್ಯಯನಪೂರ್ಣ ಅಂಶಗಳನ್ನು ಮಂಡಿಸಿದರು. ಸಮಾವೇಶದ ಕೊನೆಯ ಹಂತದಲ್ಲಿ ಎಲ್ಲಾ ಪ್ರತಿನಿಧಿಗಳಿಗಾಗಿ "ವಿಜ್ಞಾನ ರಸಪ್ರಶ್ನೆ" ಕಾರ್ಯಕ್ರಮವನ್ನು ಯೋಜನೆಯ ರಾಜ್ಯ ಸಂಚಾಲಕರಾದ ಡಾ॥ ವಸುಂಧರಾ ಭೂಪತಿಯವರು ನಡೆಸಿಕೊಟ್ಟರು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 180 ಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳಿಗೆ ಅಭಿನಂದನಾ ಪತ್ರಗಳನ್ನು, ಅತಿಥಿಗಳಿಗೆ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು.

**15. ಪರಿಶಿಷ್ಟ ಜಾತಿ/ಪಂಗಡದ ಪದವಿ ವಿದ್ಯಾರ್ಥಿ/ಕಾರ್ಯಕರ್ತರಿಗೆ "ವೈಜ್ಞಾನಿಕ ಮನೋಭಾವ, ಆರೋಗ್ಯ ನೈರ್ಮಲ್ಯ ಹಾಗೂ ಔದ್ಯೋಗಿಕ ಸಬಲೀಕರಣ" ದ ಕುರಿತು ಒಂದು ದಿನದ ಕಾರ್ಯಾಗಾರ :**

ದಿನಾಂಕ 1.04.2016ರಂದು ಕರಾವಿಪದ ಪ್ರೊ॥ ಎಂ.ಎ. ಸೇತುರಾವ್ ಸಭಾಂಗಣದಲ್ಲಿ ವಿದ್ಯಾರ್ಥಿಗಳು ಹಾಗೂ ಕಾರ್ಯಕರ್ತರಿಗೆ "ವೈಜ್ಞಾನಿಕ ಮನೋಭಾವ, ಆರೋಗ್ಯ ನೈರ್ಮಲ್ಯ ಹಾಗೂ ಔದ್ಯೋಗಿಕ ಸಬಲೀಕರಣ" ದ ಕುರಿತು ಒಂದು ದಿನದ ಕಾರ್ಯಾಗಾರ ಏರ್ಪಡಿಸಲಾಗಿತ್ತು. ಉದ್ಘಾಟಕರಾಗಿ ಅಂತರಾಷ್ಟ್ರೀಯ ಖ್ಯಾತಿಯ ಚಿತ್ರಕಲಾವಿದರಾದ ಶ್ರೀ ಕೆ.ಟಿ. ಶಿವಪ್ರಸಾದ್ ಆಗಮಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀಮತಿ ಡಾ॥ ವಸುಂಧರಾ ಭೂಪತಿ, ಗೌರವ ಕಾರ್ಯದರ್ಶಿ, ಕರಾವಿಪ, ಅಧ್ಯಕ್ಷತೆಯನ್ನು ಉಪಾಧ್ಯಕ್ಷರಾದ ಶ್ರೀ ಚಳ್ಳಕೆರೆ ಯರ್‍ರಿಸ್ವಾಮಿ ವಹಿಸಿದ್ದರು. "ವೈಜ್ಞಾನಿಕ ಮನೋಭಾವ ಹಾಗೂ ಮೂಢನಂಬಿಕೆ" ಕುರಿತು ಪವಾಡಗಳ ಪ್ರಾತ್ಯಕ್ಷಿಕೆ ಮೂಲಕ ಡಾ॥ ನರೇಂದ್ರ ನಾಯಕ್, ಅಧ್ಯಕ್ಷರು, ಅಖಿಲ ಭಾರತ ವಿಚಾರವಾದಿಗಳ ಸಂಘ, "ಆರೋಗ್ಯ ಮತ್ತು ದಲಿತ" ಕುರಿತು ಡಾ॥ ಪ್ರಕಾಶ್ ಸಿ. ರಾವ್, ವೈದ್ಯರು, ಶ್ರೀ ಜಿ.ಬಿ. ಸಂತೋಷ್‌ಕುಮಾರ್, ಶಿಕ್ಷಕರು ಅವರು

“ಪದವಿ ನಂತರ ವಿದ್ಯಾರ್ಥಿಗಳಿಗಿರುವ ವಿಪುಲ ಅವಕಾಶಗಳು” ಹಾಗೂ ಶ್ರೀ ಸಿ.ಜಿ. ಶ್ರೀನಿವಾಸ್, ಅಧ್ಯಕ್ಷರು, ಪರಿಶಿಷ್ಟ ಜಾತಿ/ಪಂಗಡ ಉದ್ದಿಮೆದಾರರ ಸಂಘ, ಇವರುಗಳು ನೆರೆದಿದ್ದ ಸಭಿಕರಿಗೆ ಗೋಷ್ಠಿಗಳ ಮುಖೇನ ತಿಳುವಳಿಕೆ ನೀಡಿದರು.

***********

## KARNATAKA RAJYA VIJNANA PARISHAT

Vijnana Bhavan, No.24/2, 21st Main Road, BSK II Stage, Bengaluru.

Annual Report of Activities 2015-16

1. **State level Women's Science Conference:**

A State level women's science conference was organized on 8-9, April 2015 at Regional Science Centre, KUD Campus, Dharwad. Women representatives selected from all over state participated in the conference. These women were selected from various sections of society like; education, health as well as women's welfare. Eminent educationists, scientists as well as representatives from media were invited as resource persons to guide the participants on various issues relating to the women. Renowned Chairperson of State Women Commission Smt. Manjula Manasa inaugurated the event in presence of other dignitaries Dr. Udayaraikar, Director of Regional Science Centre along with Shri S.V. Sankanur, President, KRVP and Shri Sanjeevkumar Bhooshetty of Dharwad, Jilla Samithi. Altogether 98 representatives successfully participated in the event.

2. **15th All India People's Science Congress** :

15th All India People's Science Congress was jointly organized by Karnataka Rajya Vijnana Parishath (KRVP) and Bharath Gyan Vijnan Samithi (BGVS) on 22-25th May 2015 at Jnana Jyothi Auditorium, Bengaluru. Various activities and programmes were organized in advance to create awareness regarding the programme under the banner of pre-congress activities.

**Pre- Congress Workshops:**

(i) "Workshop on protection of Western Ghats": The programme was held at Prof M.A. Sethurao Auditorium, Karnataka Rajya Vijnana Parishat, Bengaluru on 5th & 6th May, 2015.

(ii) " Development of Scientific temper" ": The programme was held at Prof M.A. Sethurao Auditorium, Karnataka Rajya Vijnana Parishat, Bengaluru & Govt Science College, Mahalakshmipura, Bengaluru on 14th & 15th May, 2015.

(iii) Poster Presentation on " Development of Scientific temper" & "Current developments & facts in Science & Technology" was held on 15th, 16th & 17th May 2015 at Aurad, Humnabad, Bidar, Bhalki & Basavakalyan.

(iv) Poster Presentation on " Development of Scientific temper" : was held on 17th, & 18th May 2015 at Prof K.H.Patil Krushi Vigyan Kendra, Hulakoti, Gadag District.

(v) Poster Presentation on " Development of Scientific temper" & "Current developments & facts in Science & Technology" was held on 17th May 2015 at Vidyavardhaka Sangha, Dharwad.

(vi) Poster Presentation on " Development of Scientific temper" & "Current developments & facts in Science & Technology" was held on 18th May 2015 in major streets of Raichur.

(vii) Poster Presentation on " Development of Scientific temper" & "Current developments & facts in Science & Technology" was held on 19th May 2015 in major streets of Haveri.

The main objective of organizing All India People Science Congress being promoting Scientific temper among citizens and also applications of Science & technology for the benefits of citizens. The programme was inaugurated by Hon'ble Shri M. Hamid Ansari, Vice- President of India, Governor of Karnataka Hon'ble Shri Vajubhai Rudabhai Vala, Renowned Scientists Honorary President, JNCASR, Prof C.N.R.Rao & Prof U.R.Rao were present during the inauguration programme. Nearly 800 delegates representing 38 people's organization from across the country participated in the event. Themes which were discussed during this 4 days event were as follows: Science, Myth & Scientific temperament, Self reliance, Development policies & Alternatives, Development in Karnataka, Contribution of Science & Technology for livelihood, Prevention of superstitious practices act & its implementation, Reports on Conservation of Western Ghats, Impact of Climate Change on Agriculture & Environment, Challenges of Urbanisation & science, Uniform school education, Right to Education, Challenges of Food Security, Gender inequalities & Women's Security, Marginalised Communities and Development & Accessibility of Health Services & Challenges in Primary Health Care.

### 3. Science Writers Workshop.

A 5 day workshop to encourage budding science writers and improve their quality of writing was organized at Kannada University Campus, Hampi, Hospet during 22-26, July 2015. Prof H.C. Boralighaiah, Hon'ble Vice Chancellor of Kannada University, Inaugurated the programme. Smt. Hariprasad and Dr. Shekhar Gowler provided the able guidance as Director and Asst. Director of the workshop. Resource persons including Shri Haldoddery Sudheendra, Dr. V.N. Nayak, Dr. H.R. Swamy, Smt. Sumangala Mummigatti, Shri Poornaprajna Belur, Shri Narayanababanagar, Shri Samad Kottur and Shri S. Manjunath were involved to provide useful tips to the participants. 40 budding science writers and journalists from all over the state participated in the event.

### 4. State level Science Exhibition for graduate students.

A state level science exhibition for graduate students was organized during 8-9 August 2015 at LVD College, Raichuru.

### 5. Karnataka Vijnana Vidya Jagruthi (KVVJ) Students-Scientist Interaction Programme .

Karnataka Rajya Vijnana Parishat had organized KVVJ-student scientist interaction programme in 10 clusters of the state for the higher secondary and pre-university students. 195 students from 3 districts in a cluster took part in the event.

Chamarajanagara Cluster programme was organized on 11-12, August 2015 at Bhramaramba Kalyana Mantapa, Kollegala. Chikkabalalpura Cluster programme was organized on 10-11, August 2015 at Veerasoudha Auditorium, Vidurashwatha, Gowribidanur. Kalburgi Cluster programme was organized on 21-22, September 2015 at St. Xaviour PU College, Jevargi Road, Kalburgi. Shimoga Cluster programme was organized on 21-22, Sept 2015 at Ambedkar Bhavan, Shimoga. Belgaum Cluster programme was organized on 11-12, Sept 2015 at Nithyamangala Sabhabhavan, Panth, Balekundri, Belgaum. Dharwad Cluster programme was organized on 11-12, Sept 2015 at Thapovana, Yellapur, U.K. Dist. Chitradurga Cluster programme was organized on 10-11, Oct 2015 at Sports Auditorium, Onake Obavva Stadium, Chitradurga. Similarly, Koppala Cluster programme was organized on 8-9, Nov 2015 at 1st Grade College, Koppal. Bengaluru Cluster programme was organized on 2-3, Nov 2015 at Dr. Besent Park, Doddaballapur and Kodagu Cluster programme was organized on 18-19, Jan 2016 at Sahakara Bhavan, Kushalanagar.

Altogether more than 2000 students and 36 eminent scientists of Karnataka State actively participated in the event.

### 6. Karnataka Rajya Vijnana Parishat Foundation Day

Karnataka Rajya Vijnana Parishat celebrated its 35th Anniversary on 11th November 2015 and its contribution of founder members by organizing various science awareness programmes held across the state.

### 7. Science Awareness Programme for Non- Science Teachers

Science awareness programme for non-science teachers ( arts section) : The main aim of the programme is to bring awareness on different divisions of science such as: Environmental Science, Geology, Development of Scientific temper, Science in Kitchen & Debunk of miracles. The programme was held on 13th & 14th November 2015 at DIET, Church Circle, Tumkuru.

### 8. 23rd State level Children Science Congress 2015

23rd State level Children Science Congress was organized from 27-29th November 2015 at Sathish Sugars Academy College, NSF Campus, Gokak with the collaboration of Dept. of Science & Technology, Govt. of Karnataka, NCSTC, New Delhi and Dist. Committee of Chikkodi Educational Dist.

Programme was inaugurated on 27th November 2015 by Dr. M.S. Kulkarni, Dean of Rani Chennamma Agri University, Belgaum. Shri M.D. Bellary, Jt. Director, Dept. of Education, Project Officer, Balavikas Academy, Dharwad along with Dr. Vasundhara Bhupathi, Shri Pandith K. Balure and Shri B. Doddabasappa participated in the programme. Renowned science writer and senior KRVP member Prof. A.K. Bhat was participated as special invitee. Team leaders from various schools presented their project reports in the presence of eminent experts. De-mystification Demonstration Programme was presented by Shri Hulikal Nataraj for the benefit of students and teachers gathered.

30 projects were selected to be presented at National level event among 301 projects presented a state level event. The concluding ceremony organized on 29th November 2015 was attended by Shri Sathish Jarkiholi, Hon'ble Minister, Govt of Karnataka. Shri G.B. Mannikeri, Jt. Director, Dept. of Education, Smt. Dakshayini Basavaraj from Balavikas Academy, Shri A.K. Bhat were present at the programme. Shri S.V. Sankanur, Hon'ble President of KRVP and sitting MLC of Karnataka Legislative Council presided over the programme.

### 9. Young Scientist Award

District level competition for the award of Young Scientist was organized on 09.01.2016 all over the state simultaneously. Around 1000 students from various districts of the state took part in the event. Students secured 1st, 2nd and 3rd places were qualified to attend state level event.

State level competition for the award of young scientist was organized from 23-25 at Ambedkar Bhavan, Shimoga, 97 students selected from 34 districts attended the event. "Parisara Jatha" organized to mark the occasion along with a presentation from Sr. Scientist of ISRO Shri Hiriyanna were the highlights of the programme. The following students were selected and awarded a title of "Young Scientist" in the event.

List of Young Scientist Awardees

1. Shri Aniketh Shenai
   Shree Venkataramana English Medium School
   Kundapur, Udupi dist.
   Mobile : 9986232297

2. Mahaveer Chowgla
   Bharatesh Composite P.U. College (H.S. Section)
   Bellada Bagewadi
   Taluk Hukkeri, Dist. Belagavi
   Mobile : 7760788934

3. Indhudhar B.
   Shree Siddhaganga H.S.
   B.H. Road, Tumkur
   Mobile : 9886036919

**10. Inter Collegiate Kannada Science Lecture Competition.**

KRVP has been organizing inter collegiate Kannada science lecture completion for graduate students from various universities of the state. This year's district level competition was organized on 29.01.2016 simultaneously all over the state. An average of 25 students from every district took part in the event. 4 students under 4 different subject have been selected based on their performance for the state level event.

A state level inter collegiate Kannada lecture competition is scheduled on 3-4, March 2016 at Central Home Science College, Palace Road, Bengaluru.

**11. Sir C.V. Raman State level "That antha Heli – Science Quiz Programme"**

A state level science quiz commemorating most eminent scientist of our country Sir. C.V. Raman and National Science Day Celebration was organized from 08.01.2016 – 01.02.2016 with the joint collaboration of Dept. of Science & Technology, Govt. of Karnataka, Karnataka Science & Technology Promotion Society (KSTEP), DSERT and Chandana Channel, Doordarshan Kendra, Bengaluru.

81 students were selected by Office of the Dy. DDPI of all the 34 districts including the educational districts of the state, for the state level event. A written test was conducted 07.01.2016 at Regional Institute of Co-operative Management for the participant.

Top 54 meritorious students among 81 were selected to participate in 27 rounds of science quiz including elimination, quarter finals and semifinals. These 27 rounds of quiz were conducted and recorded at Doordarshan Kendra studios from 8-9 February and 30.01.2016. The recording of quarter finals, semifinals and final rounds were conducted on 1-2, February 2016. Each round contained 12 questions inclusive of two questions based on science experiment demo for a team of 3 students.

Dr. Ravindranath, Vice Chancellor of Rajiv Gandhi Medical University was a Chief Guest during the recording of final round. He presented a cash award of Rs.10,000/-, Rs.7,500/- and Rs.5,000/- along with a memento and citation to the winners in the presence of Dr. Vasundhara

Bhupathi, Hon. Secretary, KRVP along with Shri N. Chandrashekhar, Dy. DG, Doordarshan Kendra, Bengaluru. The state level science quiz was telecast on Chandana Channel of Doordarshan from 21st January to February 2016, on weekdays except Saturday & Sunday at 9.30 pm.

**List of the winners is as follows ;**

1. Ku. Mohammed Sohail
   Sarvajna High School, Shrirangapatna - Ist Prize
2. Ku. C.V. Vineeth, KHEP High School, Kadra, Karwar - 2nd Prize
3. Ku. Raghundaan Malagi, Geleyara Balaga H.S., Haveri - 3rd Prize

## 12. Demonstration programme of De-mystification of miracles:

Two demonstration programmes of de-mystification of miracles was organized at Govt. Primary School, Govindarajanagar, Magadi Road, Bengaluru at 10.00 am on 15.2.2016. Renowned personality in the field of scientific awareness Dr. Narendranayak gave the demonstration and spoke regarding importance of scientific awareness among the children. A similar programme was organized on the same day at Higher Primary School of Ashoka Shishuvihar, Chamarajpet, Bengaluru.

## 13. Science Exhibition Competition:

Divisional level science exhibition competitions were held at 6 zones namely:

1. Dharwad division: The competition was held on 8th March 2016 at KLE's Shri Kaadasiddeshwara College and H.S. Kotambri Science College, Hubli, Shri Sunegar M.S. Principal, H.S.K. Science College, Vidyanagar, Hubli was the programme coordinator of this event.

2. Mysuru division: The competition was held on 3rd March 2016 at Govt. Science College, Salagane Road, Hassan. Shri Srinivas Natekar was the programme coordinator of this event.

3. Mangaluru division: The competition was held on 8th March 2016 at Mahaveera College, Moodabidare, Udupi. Shri Dinesh Shettigar was the programme coordinator of this event.

4. Kalburgi division: The competition was held on 29th March 2016 at Murugarajendra B.Ed. College, Kalburgi. Shri Girish B. Kadlewad was the programme coordinator of this event.

5. Bengaluru division: The competition was held on 26th March 2016 at Dayananda Sagar institutions, Bengaluru. Shri T.B. Niranjan was the programme coordinator of this event.

6. Shivamogga division: The competition was held on 19th March 2016 at I.D.S. Govt. college, Chickmagalur. Shri T.G. Krishnamurthy Raj Urs was the programme coordinator of this event.

The state level Science Exhibition competition was held on 1st and 2nd April 2016 at Regional Institute of Education, Manasa Gangothri, Mysuru.

**14. State level Womens Science Conference:**

The programme was held on 22-23, March 2016 at Raichur Agricultural University Campus. The programme was inaugurated by ex-minister and litterateur Dr. B.T. Lalitha Nayak. Dr. Kavitha Patil, Dean, RIMS was the chief guest, Dr. M.K. Nayak, Research Director, Shivamogga, Agricultural University , Shri Challakere Yerriswamy, Vice President, Shri Girish B. Kadlewad, Treasurer, Dr. Kunteppa Gowripur, Member and Dr. Vasundhara Bhupathi, Hon. Secretary, KRVP were present on the dias.

**The following sessions were held on both the days:**

**22nd March 2016**

"Contribution of women in science field" - Dr. N.S. Leela, Science Communicator and Professor.
"Antisuperstition & Black magic Act"-Smt A.Jyothi, President, All India Women's Foundation.
"Women and stress"- Dr V.A.Malipatil, Retd Psychiatrist, Raichur.

**23rd March 2016**

" Superstition and Media"- Dr Abdul Rehman Pasha, Sience Communicator.
" Agriculture and Women"- Dr Mouneshwari Kammar, Raichur Agricultural University, Raichur.
" Electronic Media- Is it a boon or bane?"- Smt G.V.Nirmala, Retd. Scientist, NAL, Bengaluru.
At the end there was a science quiz competition held for the delegates which was presented by Dr Vasundhara Bhupathi, Hon Secretary, KRVP.
About 180 delegates participated in this conference.

**15. A one day workshop for SC/ST degree students/volunteers on "Scientific temper, Health Consciousness & Career guidance:**

The programme was conducted on 1st April 2016 at Prof. M.A. Sethu Rao Auditorium, KRVP premises, BSK II Stage, Bengaluru. The programme was inaugurated by noted international reputed artist Shri K.T. Shivaprasad, Dr. Vasundhara Bhupathi, Hon. Secretary, KRVP was the Chief Guest on this occasion. Shri Challakere Yerriswamy, Vice President, KRVP presided over the function.

Dr. Narendra Nayak, President, Federation of Indian Rationalist Association, Dr. Prakash C. Rao, Former President, Kannada Vaidya Parishath, Shri G.B. Santosh Kumar, Secretary, KRVP Mysuru district committee and Shri C.G. Srinivas, President SC/ST Industrialists and Entrepreneurs Association, Bengaluru participated as the resource persons.

**********